## ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾದೀಶರ ನ್ಯಾಯಾಲಯ ಯಾದಗಿರಿ.
## ಸಿ.ಸಿ. ನಂಃ 3783/2023

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಅಬಕಾರಿ
ಪೊಲೀಸ್ ಇಲಾಖೆ

// ವಿರುದ್ಧ //

ಆರೋಪಿ ಃ ಅನಂದಪ್ಪ ತಂದೆ ಚಂದ್ರಪ್ಪಾ,
ಸಾಃ ನಾಸಲವಾಯಿ ಗ್ರಾಮ,
ತಾಃ ಗುರುಮಠಕಲ್, ಜಿಃ ಯಾದಗಿರಿ.

<u>ದೋಷಾರೋಪಣೆ</u>

ನಾನು ಶ್ರೀ. ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 07.10.2022 ರಂದು ಮಧ್ಯಾಹ್ನ 04.10 ಗಂಟೆಗೆ ಅಬಕಾರಿ ನೀರಿಕ್ಷಕರು ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಗುರುಮಠಕಲ ತಾಲೂಕಿನ ಕುಂಟಿಮರಿ ಚೆಕ್ ಪೋಸ್ಟನಲ್ಲಿ ರಸ್ತೆಗಾವಲು ಮಾಡುತ್ತಿರುವಾಗ ಆರೋಪಿಯಾದ ನೀವು ದ್ವಿಚಕ್ರ ವಾಹನ ಸಂಖ್ಯೆ ಎಪಿ-22-ಎಡಿ-7614 ನೇದ್ದರಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 48 ಲೀ. ಕಲಬೆರಕೆ ಸೇಂದಿಯನ್ನು ಮಾರಾಟದ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿದ್ದು, ಆ ಮೂಲಕ ಆರೋಪಿತನಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1), ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

<u>ಆರೋಪಿತನ ಹೇಳಿಕೆ</u>

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರಃ ವಿಚಾರಣೆಯಾಗಬೇಕು.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ದಿನಾಂಕಃ 04.12.2024 ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 04.12.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಯಾದಗಿರಿ.